ಆಕ್ರಮಣಕ್ಕೆ ಒಳಗಾದ ಹೃದಯದೇಶಗಳಲ್ಲಿ
ಬಿಡುಗಡೆಯ ಉಸಿರನ್ನು, ಬಯಲ ಗಮಲನ್ನು

ಎತ್ತುತ್ತಿದೆ ಮಗು ತನ್ನ ಬಿಗಿದ ಮುಷ್ಟಿಯನ್ನು ಅಪ್ಪನ ಕಡೆಗೆ
ಪೀಳಿಗೆ ಪೀಳಿಗೆಗಳ ಹೋರಾಟದ ಹಾದಿಯೆಡೆಗೆ
ಕೂಗುತ್ತಿದೆ Afrika ಎಂದು! ಕೂಗುತ್ತಿದೆ
ನೈತಿಕತೆಯ ಉಸಿರನ್ನು ಜೊತೆಜೊತೆಯಲ್ಲೆ ರಕ್ತದ ವಾಸನೆಯನ್ನೂ
ಹಾದಿಬಿಡದ ನಡಿಗೆಯಲ್ಲಿ ಆಯುಧಗಳ ಹೆಮ್ಮೆಯನ್ನೂ

ಸತ್ತಿಲ್ಲ ಆ ಮಗು, ಬದುಕಿದೆ ಲಾಂಗಾ, ನ್ಯಾಂಗಾ,
ಆರ್ಲಂಡೋ, ಶಾರ್ಪ್‌ವಿಲ್‌ಗಳಲ್ಲಿ
ಬುಲೆಟ್ಟು ಹೊಕ್ಕ ಅದರ ಮೆದುಳಿನಿಂದ ಚಿಮ್ಮಿ ಹರಿದಿದೆ ರಕ್ತ
ಫಿಲಿಪ್ಪಿಯ ಪೊಲೀಸ್ ಸ್ಟೇಷನ್‌ನಲ್ಲಿ

ಮಗುವು ಕಾವಲು ಕಾಯುವ ಸೈನಿಕರೆಲ್ಲರ ನೆರಳು
ಅವರ ಗನ್ನು ಬೇಟನ್ನುಗಳಲ್ಲಿ ಆ ಮಗುವಿನ ನರಳು,
ಇದೆ ಅದು ಸಭೆಗಳಲ್ಲಿ ಕಾನೂನುಗಳಲ್ಲಿ
ಇಣಕುತ್ತದೆ ಅದು ಮನೆಮನೆಯ ಕಿಟಕಿಗಳಲ್ಲಿ
ಒಳಹೊಕ್ಕು ನೋಡುತ್ತದೆ ತಾಯಂದಿರ ಹೃದಯಗಳಲ್ಲಿ
ಬದುಕಲು ಬಯಸಿತ್ತು ಸುಮ್ಮನೆ ಆಡುತ್ತ
ಈ ಕೂಸು ನ್ಯಾಂಗಾದ ಹೂಬಿಸಿಲಿನಲ್ಲಿ,
ಈಗ ಎಲ್ಲೆಲ್ಲೂ ಅದರದ್ದೇ ರಣಕಹಳೆ
ಈಗ ಅವನು ಗಂಡಾಗಿದ್ದಾನೆ ತಿರುಗುತ್ತ ಇಡೀ ಆಫ್ರಿಕಾದಲ್ಲಿ

ಇಗೋ ನೋಡಿ ಈಗ ಅವನೆಂಥ ದೈತ್ಯ
ಅಪ್ಪಣೆ ಚೀಟಿಯ ದರ್ದಿಲ್ಲದೆ
ಲೋಕಲೋಕದಲ್ಲೆಲ್ಲ ಪಯಣಿಸುವ ಚೈತ್ಯ.

ಅದ್ಭುತವಾದ ಈ ದರ್ಶನದಲ್ಲಿ ಇನ್‌ಗ್ರಿಡ್ ಯಾಂಕರ್ ನಮಗೆಲ್ಲ ಒಂದು ಸಂದೇಶ ನೀಡುತ್ತಿದ್ದಾಳೆ. ನಮ್ಮ ಪ್ರತಿಯೊಂದು ಕ್ರಿಯೆಯೂ, ಪ್ರಯತ್ನವೂ ಹೆಣ್ಣುಮಕ್ಕಳ ಬಿಡುಗಡೆ, ಗಂಡಸರಲ್ಲಿ ವಿವೇಕದ ಉದಯ ಮತ್ತು ಮಗುವಿಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಡಲು ಮೀಸಲಾಗಬೇಕು ಎನ್ನುವುದೇ ಆ ಸೂಚನೆ.

'ಡ್ರಮ್' ಎಂಬ ನಿಯತಕಾಲಿಕದಲ್ಲಿ ಈ ಕವಿತೆಯ ಬಗ್ಗೆ ಬರೆದ ಇನ್‌ಗ್ರಿಡ್ "ನಾನು ಆ ತಾಯಿಯಲ್ಲಿ ಈ ಲೋಕದ ಎಲ್ಲ ತಾಯಂದಿರನ್ನೂ ಕಂಡೆ. ನನಗೆ ಅವಳು ನನ್ನಂತೆಯೇ ಕಾಣಿಸಿದಳು. ನನ್ನ ಮಗಳು ಸಿಮೋನ್ ಆ ಮಗುವಿನಂತೆಯೇ ಕಾಣಿಸಿದಳು. ಅಂದು ನನಗೆ ನಿದ್ದೆ ಮಾಡಲು ಸಾಧ್ಯವಾಗಲಿಲ್ಲ. ಬದುಕುವ ಅವಕಾಶ ಸಿಕ್ಕಿದ್ದರೆ ಆ ಮಗು ಏನೆಲ್ಲ ಆಗಬಹುದಿತ್ತೆಂದು